# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **674(683)** |
| ಸದಸ್ಯರ ಹೆಸರು | : | **ಶ್ರೀ ಸುನೀಲ್ ವಲ್ಯಾಪುರ್** (**ವಿಧಾನ ಸಭೆಯಿಂದ ಚುನಾಯಿತರಾದವರು**) |
| ಉತ್ತರಿಸುವ ದಿನಾಂಕ | : | **12.12.2025** |
| ಉತ್ತರಿಸುವ ಸಚಿವರು | : | **ಮಾನ್ಯ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು** |

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>(ಅ)</td><td>ಕೆ.ಕೆ.ಆರ್.ಡಿ.ಬಿ ಗೆ 2025ನೇ ಸಾಲಿನಲ್ಲಿ ಸರ್ಕಾರದಿಂದ ಬಿಡುಗಡೆಯಾದ ಅನುದಾನ ಎಷ್ಟು;<br><br>ಅದರಲ್ಲಿ ಯಾವ ಯಾವ ಕಾಮಗಾರಿಗಳಿಗೆ ಎಷ್ಟು ಅನುದಾನ ಬಿಡುಗಡೆ ಮಾಡಲಾಗಿದೆ; (ಸಂಪೂರ್ಣ ಮಾಹಿತಿ ಜಿಲ್ಲಾವಾರು ಕಾಮಗಾರಿಗಳವಾರು ನೀಡಬೇಕು)</td><td>2025ನೇ ಸಾಲಿನಲ್ಲಿ ಆರಂಭಿಕ ಶಿಲ್ಕು ರೂ. 3090.24 ಕೋಟಗಳಿದ್ದು ಈವರೆವಿಗೆ ರೂ.1628.49 ಕೋಟಿಗಳಷ್ಟು ವೆಚ್ಚ ಮಾಡಲಾಗಿದ್ದು, ಮಂಡಳಿ ಪಿ.ಡಿ ಖಾತೆಯಲ್ಲಿ ಇನ್ನು ರೂ.1461.75 ಕೋಟಿಗಳ ಅನುದಾನ ಮಂಡಳಿಯಲ್ಲಿ ಬಾಕಿ ಇರುವುದರಿಂದ ಸದರಿ ಅನುದಾನವನ್ನು ಖರ್ಚು ಮಾಡಿ, ನಂತರ ಪ್ರಸ್ತಾವನೆ ಸಲ್ಲಿಸಲು ಆರ್ಥಿಕ ಇಲಾಖೆಯು ಸೂಚಿಸಿರುವುದರಿಂದ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಗೆ ಯಾವುದೇ ಅನುದಾನ ಬಿಡುಗಡೆಯಾಗಿರುವುದಿಲ್ಲ.<br><br>2025-26ನೇ ಸಾಲಿನ ಕಾಮಗಾರಿಗಳಿಗೆ ಯಾವುದೇ ಅನುದಾನ ಬಿಡುಗಡೆ ಮಾಡಿರುವುದಿಲ್ಲ.</td></tr>
<tr><td>(ಆ)</td><td>ಕೆ.ಕೆ.ಆರ್.ಡಿ.ಬಿ ಗೆ ಅನುದಾನ ಬಿಡುಗಡೆಯಾಗಿ ತಿಂಗಳುಗಳೇ ಕಳೆದರೂ ಕ್ರಿಯಾ ಯೋಜನೆಗೆ ತರಲು ವಿಳಂಭವಾಗಿರುವುದಕ್ಕೆ ಕಾರಣವೇನು: (ಸಂಪೂರ್ಣ ಮಾಹಿತಿ ದಾಖಲೆ ಸಹಿತ ನೀಡುವುದು)</td><td>2025-26ನೇ ಸಾಲಿನ ಮಂಡಳಿಯ ಕ್ರಿಯಾ ಯೋಜನೆಯನ್ನು ರೂಪಿಸಲು ಘನವೆತ್ತ ರಾಜ್ಯಪಾಲರ ಅನುಮೋದನೆ ಪಡೆದು, ಸರ್ಕಾರದ ಆದೇಶ ಸಂಖ್ಯೆ: ಪಿಡಿಎಸ್ 28 ಹೆಚ್‌ಕೆಡಿ 2025 ದಿನಾಂಕ: 25.07.2025ರಲ್ಲಿ ಆದೇಶ ಹೊರಡಿಸಿ ಅನುಮೋದನೆ ನೀಡಲಾಗಿದೆ. ಅದರಂತೆ, ಮಂಡಳಿಯು ಇವರೆವಿಗೆ ರೂ.1401.87 ಕೋಟಿಗಳಿಗೆ ಕ್ರಿಯಾ ಯೋಜನೆ ರೂಪಿಸಲಾಗಿದೆ. ವಿವರ ಈ ಕೆಳಕಂಡಂತಿದೆ.<br><br>(ರೂ. ಕೋಟಿಗಳಲ್ಲಿ)<br><table><tr><th>ಕ್ರ ಸಂ</th><th>ಜಿಲ್ಲೆ</th><th>ನಿಗದಿಪಡಿಸಿದ ಅನುದಾನ</th><th>ಮಂಜೂರಾತಿ ನೀಡಿದ ಅನುದಾನ</th><th>ಬಾಕಿ ಅನುದಾನ</th></tr><tr><td>1</td><td>ಬೀದರ</td><td>437.91</td><td>33.44</td><td>404.47</td></tr><tr><td>2</td><td>ಕಲಬುರಗಿ</td><td>821.51</td><td>242.04</td><td>579.47</td></tr><tr><td>3</td><td>ಯಾದಗಿರಿ</td><td>342.86</td><td>113.43</td><td>229.42</td></tr><tr><td>4</td><td>ರಾಯಚೂರು</td><td>526.17</td><td>70.98</td><td>455.19</td></tr><tr><td>5</td><td>ಕೊಪ್ಪಳ</td><td>336.07</td><td>128.66</td><td>207.41</td></tr><tr><td>6</td><td>ಬಳ್ಳಾರಿ</td><td>166.34</td><td>32.83</td><td>133.50</td></tr><tr><td>7</td><td>ವಿಜಯನಗರ</td><td>319.10</td><td>120.18</td><td>198.91</td></tr><tr><td>8</td><td>ಸಿ.ಡಿ.ಕ್ಯೂ</td><td>110.00</td><td>50.00</td><td>60</td></tr></table></td></tr>
</table>

| | | |
|---|---|---|
| | | |

| | | | | |
|---|---|---|---|---|
| 9 | ಸಿ ಎಂ ಡಿ ಕ್ಯೂ | 110.00 | 92.00 | 18.00 |
| 10 | ಜಿ ಡಿ ಕ್ಯೂ | 110.00 | 110.00 | 00 |
| 11 | RF | 100.00 | 0.31 | 99.69 |
| 12 | ಬಜೆಟ್ ಪ್ಯಾರಾ | 1470.00 | 358.00 | 1112.00 |
| 13 | ಕ.ಕ ಭಾಗದ ವಿಶ್ವವಿದ್ಯಾಲಯಗಳು | 100.00 | 00 | 100 |
| 14 | ಆಡಳಿತ ವೆಚ್ಚ | 50.00 | 50.00 | 00 |
| | | 5000.00 | 1401.87 | 3598.13 |

ಬಾಕಿ ಉಳಿದ ಅನುದಾನ ರೂ. 3598.13 ಕೋಟಿಗಳಿಗೆ ಕ್ರಿಯಾ ಯೋಜನೆ ರೂಪಿಸುವ ಪ್ರಕ್ರೀಯೆ ಚಾಲ್ತಿಯಲ್ಲಿರುತ್ತದೆ. ಮೈಕ್ರೋ / ಮ್ಯಾಕ್ರೋ ಯೋಜನೆಯಡಿ ಜಿಲ್ಲಾ ಉಸ್ತುವಾರಿ ಸಚಿವರುಗಳು ಹಾಗೂ ಮಾನ್ಯ ಶಾಸಕರುಗಳು ಜಿಲ್ಲಾಧಿಕಾರಿಗಳಿಗೆ ನಿಗದಿತ ವೇಳೆಯಲ್ಲಿ ಕ್ರಿಯಾ ಯೋಜನೆ ವಿವರ ನೀಡದೆ ಇರುವ ಕಾರಣ ಜಿಲ್ಲಾಧಿಕಾರಿಗಳಿಂದ ಕ್ರಿಯಾ ಯೋಜನೆ ಮಂಡಳಿಗೆ ಸಲ್ಲಿಸಲು ವಿಳಂಬವಾಗುತ್ತಿದೆ.

| | | |
|---|---|---|
| (ಇ) | ಕಲಬುರಗಿ ಜಿಲ್ಲೆಗೆ ಬಿಡುಗಡೆಯಾದ ಅನುದಾನ ಎಷ್ಟು; ಮತ್ತು ಯಾವ ಯಾವ ಕಾಮಗಾರಿಗಳಿಗೆ ಅನುದಾನ ಬಿಡುಗಡೆ ಮಾಡಲಾಗಿದೆ; ಮತ್ತು ಕಾಮಗಾರಿಗಳು ಯಾವ ಹಂತದಲ್ಲಿದೆ? (ಸಂಪೂರ್ಣ ತಾಲ್ಲೂಕುವಾರು ಮಾಹಿತಿ ನೀಡುವುದು) | ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯಿಂದ 2025-26ನೇ ಸಾಲಿನಲ್ಲಿ ಕಲಬುರಗಿ ಜಿಲ್ಲೆಗೆ ರೂ.821.51 ಕೋಟಿಗಳ ಅನುದಾನವನ್ನು ಹಂಚಿಕೆ ಮಾಡಲಾಗಿದೆ. 2025-26ನೇ ಸಾಲಿನ ಕಾಮಗಾರಿಗಳಿಗೆ ಯಾವುದೇ ಅನುದಾನ ಬಿಡುಗಡೆ ಮಾಡಿರುವುದಿಲ್ಲ. |

**ಸಂಖ್ಯೆ: ಪಿಡಿಎಸ್ 79 ಹೆಚ್‌ಕೆಡಿ 2025**

**(ಡಿ.ಸುಧಾಕರ್)**
ಯೋಜನೆ, ಕಾರ್ಯಕ್ರಮ ಸಂಯೋಜನೆ
ಮತ್ತು ಸಾಂಖ್ಯಿಕ ಇಲಾಖೆ ಸಚಿವರು.